
# ಬಸವ ಪಥ

ಸಂಪುಟ ೧೧ ಸಂಚಿಕೆ ೨ ಮೇ ೧೯೮೯



ಜಗಜ್ಯೋತಿ ಬಸವೇಶ್ವರ

...ವೆಂಬ ಪ್ರಣತಿಯಲ್ಲಿ, ಭಕ್ತಿರಸವೆಂಬ ತೈಲವನೆರೆದು
...ಬ ಬತ್ತಿಗೆ ಬಸವಣ್ಣನೆಂಬ ಜ್ಯೋತಿಯ ಮುಟ್ಟಿಸಲು
...ಳಗಿ ಬೆಳಗುತಿರ್ದುದಯ್ಯ ಶಿವನ ಪ್ರಕಾಶ!

551/3 UIR 0551

## ... ಸಮಿತಿ, ಬೆಂಗಳೂರು-೧
## ಬೆಳ್ಳಿಹಬ್ಬದ ವಿಶೇಷ ಸಂಚಿಕೆ

ಬಸವ ಸಮಿತಿಯ ಬೆಳ್ಳಿಹಬ್ಬದ ವಿಶೇಷ ಸಂಚಿಕೆ

# ಬಸವ ಪಥ

ಸಂಪುಟ ೧೧ ಮೇ ೧೯೮೯ ಸಂಚಿಕೆ ೨

294'5513 05(B) VIR

00551

ಪ್ರಧಾನ ಸಂಪಾದಕರು : ಪ್ರೊ|| ಬಿ. ವಿರೂಪಾಕ್ಷಪ್ಪ
ಸಹ ಸಂಪಾದಕರು : ಚಂದ್ರಿಕಾ ಪುರಾಣಿಕ

ಕೊಡುಗೆ / /
............
............
ಇಂದ: ಪಿ.ಕೆ. ಪುರಾಣಿಕ
ಶ್ರೀಗಿರಿ ಪ್ರಕಾಶನ, "ಶ್ರೀಗಿರಿ"
4/5ಎ, ಅಲಿ ಅಸ್ಕರ ರಸ್ತೆ,
ಬೆಂಗಳೂರು – 560 052
Tel: 22264361

ಪ್ರಕಾಶಕರು :
ಬಸವ ಸಮಿತಿ
'ಬಸವ ಭವನ' ಶ್ರೀ ಬಸವೇಶ್ವರ ರಸ್ತೆ,
ಶ್ರೀ ಬಸವೇಶ್ವರ ವೃತ್ತ, ಬೆಂಗಳೂರು – ೫೬೦ ೦೦೧.
ದೂರವಾಣಿ : ೭೫೫೦೫.

# ಬಸವ ಪಥ

## ಬಸವ ಸಮಿತಿಯ ಬೆಳ್ಳಿಹಬ್ಬದ ವಿಶೇಷ ಸಂಚಿಕೆ

ಸಂಪುಟ-೧೧ ಮೇ ೧೯೮೯ ಸಂಚಿಕೆ-೨

ಸಂಚಿಕೆಯಲ್ಲಿ

೧. ಇಪ್ಪತ್ತೈದು ವರ್ಷಗಳ ಸಾಧನೆಗಳ ಸಂಕ್ಷಿಪ್ತ ವರದಿ ೧
—ಶ್ರೀ ಅನ್ನದಾನಯ್ಯ ಪುರಾಣಿಕ

೨. ಓ ! ಕ್ರಾಂತಿ ಪುರುಷ ೨೧
—ಎನ್. ಎಂ. ಕೆ. ಸೋಗಿ

೩. ಶ್ರೀ ಕುವೆಂಪು ಅವರ ವಿಶ್ವಮಾನವ ಸಂದೇಶ ೨೨
—ಡಾ॥ ಕು.ವೆಂ.ಪು.

೪. ಬಸವಣ್ಣನವರ ವಚನಗಳಲ್ಲಿ ದುರಂತ ಪ್ರಜ್ಞೆ–ಬದುಕುವ ಪ್ರತಿಜ್ಞೆ ೨೪
—ಡಾ॥ ಸಿದ್ಧಯ್ಯ ಪುರಾಣಿಕ

೫. ಅನುಭವ ಮಂಟಪ ತತ್ವಗೋಷ್ಠಿ ವೈಜ್ಞಾನಿಕ ಹಿನ್ನೆಲೆಯಲ್ಲಿ ೨೬
—ಪ್ರೊ॥ ಬಿ. ವಿರೂಪಾಕ್ಷಪ್ಪ

೬. ಬಸವಣ್ಣನವರ ಅನುಭಾವ ದರ್ಶನ ೪೪
—ಯೋಗೀಶ ಯಡ್ರಾವಿ

೭. ಚನ್ನಬಸವನ ಜನನ ಎಲ್ಲಿ ಮತ್ತು ಯಾವಾಗ ಆಯಿತು ? ೫೫
—ಡಾ॥ ಫ. ಗು. ಹಳಕಟ್ಟಿ

೮. ಶರಣ ನುಲಿಯ ಚಂದಯ್ಯ ೬೦
—ಡಾ॥ ಮಲ್ಲಿಕಾರ್ಜುನ ಶಿ. ಲಠ್ಠೆ

೯. ಶಾಸನೋಕ್ತ ಮರುಳಸಿದ್ಧ ಹಾಗೂ ರೇವಣಸಿದ್ಧ ೬೭
ಡಾ॥ ಬಿ. ಆರ್. ಹಿರೇಮಠ

೧೦. ಮೆರೆಮಿಂಡಯ್ಯಗಳ ವಚನಗಳು ೭೧
—ಸಂಗ್ರಾಹಕರು : ಜಗದೀಶ್, ಬೆಂಗಳೂರು.

೧೧. ವೀರಶೈವ ತತ್ವದ ಸಾಕಾರರೂಪಿ ಲಿಂ. ಹಾನಗಲ್ಲು ಕುಮಾರ ಮಹಾಸ್ವಾಮಿಗಳು ೮೧
—ಡಾ॥ ಎಸ್. ಎಂ. ವೃಷಭೇಂದ್ರಸ್ವಾಮಿ

೧೨. ವಚನಗಳು, ಸ್ವರವಚನಗಳು : ಒಂದು ವಿವೇಚನೆ ೮೪
—ಡಾ॥ ವ್ಹಿ. ಜಿ. ಪೂಜಾರ

೧೩. ಕಾಳಾಮುಖರು ೮೮
—ಡಾ॥ ಎಸ್. ವಿದ್ಯಾಶಂಕರ

೧೪. ವಚನಗಳಲ್ಲಿ ಕಾಯಂಕ ತುಂಬಿ ೯೯
—ಟಿ. ಆರ್. ಮಹಾದೇವಯ್ಯ

೧೫. ಅತಿವರ್ಣ ಷಡಾಶ್ರಮ ಧರ್ಮವು ೧೦೨
—ಡಾ॥ ಫ ಗು. ಹಳಕಟ್ಟಿ

# ಬಸವಣ್ಣನವರ ವಚನಗಳಲ್ಲಿ ದುರಂತ ಪ್ರಜ್ಞೆ-ಬದುಕುವ ಪ್ರತಿಜ್ಞೆ

— ಸಿದ್ಧಯ್ಯ ಪುರಾಣಿಕ

ಪ್ರಪಂಚದ ಪ್ರಮುಖ ವಿಚಾರಧಾರೆಗಳಾದ ಆದರ್ಶವಾದ-ವಾಸ್ತವವಾದಗಳ ಬಳಿವಿಡಿದು ಆಶಾವಾದ ನಿರಾಶಾವಾದಗಳು ಹುಟ್ಟಿಕೊಂಡಿವೆ. ಆಶಾವಾದದ ಕಣ್ಣಿಗೆ ಬೆಳ್ಳಗಿದ್ದುದೆಲ್ಲ ಹಾಲಾಗಿ ಕಾಣಿಸುತ್ತದೆ : ನಿರಾಶಾ ವಾದದ ಕಣ್ಣಿಗೆ ನಿಜವಾದ ಹಾಲೂ ಕಳ್ಳಿಯ ಹಾಲಾಗಿ ಕಾಣಿಸುತ್ತದೆ. ಮಾನವನ ಬದುಕು ಇವೆರಡನ್ನೂ ಒಳ ಗೊಂಡು 'ಅಪರಿಮಿತ ಕತ್ತಲೆಯೊಳಗೆ ವಿಪರೀತದ ಬೆಳಗಿ'ಗೆ ಉದಾಹರಣೆಯಾಗಿ ನಿಂತಿದೆ.

ಮಾನವನ ಬದುಕೊಂದೇ ಅಲ್ಲ, ಸಮಸ್ತ ಸೃಷ್ಟಿಯೇ ಮನೋಹರ-ಭಯಂಕರ : ಒಟ್ಟನೋಟಕ್ಕೆ ಮನೋಹರ ; ದಿಟ್ಟಿಸಿ ನೋಡಿದರೆ ಭಯಂಕರ. ಮೇಲು ನೋಟಕ್ಕೆ ಅನಂತ ಸೌಂದರ್ಯದ ಲೀಲಾವಿಲಾಸ ಗೋಚರಿಸಿದರೆ ಒಳಹೊಕ್ಕು ನೋಡಿದಾಗ ಒಂದನ್ನೊಂದು ತಿಂದು ಬದುಕುವ ಜೀವಾವಳಿಯ ಮೈ ನಡುಗಿಸುವ ದುರಂತಮಯ ದೃಶ್ಯ. ಇವೆರಡರಲ್ಲಿ ಯಾವುದನ್ನೇ ಪೂರ್ಣ ಸತ್ಯವೆಂದು ನಂಬಿ ನಡೆದರೂ ಭ್ರಮಿತ ರಾಗುತ್ತೇವೆ.

ಬದುಕಿನಲ್ಲಿ ಬೆಳಕು ಕತ್ತಲೆಗಳೆರಡು, ದುರಂತ ಸುಖಾಂತಗಳೆರಡೂ, ಆಶೆ-ನಿರಾಶೆಗಳೆರಡೂ, ನೋವು-ನಲಿವುಗಳೆರಡೂ ಅನಿವಾರ್ಯವಷ್ಟೇ ಅಲ್ಲ, ಪರಸ್ಪರ ಪೂರಕಗಳೆಂದು ಅರಿತುಕೊಂಡು ಬದುಕಿನ ದುರಂತ ವನ್ನೂ, ಅದರ ಅಂತಿಮ ಗುರಿಯನ್ನೂ ಸಮಾನವಾಗಿ ಸ್ವೀಕರಿಸಿದವರು ಬಸವಣ್ಣನವರು. ದುರಂತಾಂಶಗಳ ಮೇಲೆ ತೆರೆ ಎಳೆಯುವ, ಸುಖಾಂಶಗಳನ್ನು ವೈಭವೀ ಕರಿಸುವ ರೀತಿ ಅವರದಲ್ಲ. ಅವರು ಕಂಡ ಈ ದುರಂತ ಚಿತ್ರಗಳನ್ನು ಅನ್ಯರೂ ಕಂಡಿರಬಹುದು ; ಆದರೆ ಅವರಂತೆ ಅವುಗಳಾಚೆಯ ಸ್ಪೈಪಿನ ಚಿತ್ರಗಳನ್ನು ನೀಡಿದವರಾರು ?

"ಹಬ್ಬಕ್ಕೆ ತಂದ ಹರಕೆಯ ಕುರಿ ತೋರಣಕ್ಕೆ
ತಂದ ತಳಿರ ಮೇಯಿತ್ತು ;"

"ಹಾವಿನ ಬಾಯ ಕಪ್ಪೆ ಹಸಿದು ಹಾರುವ
ನೊಣಕ್ಕೆ ಆಸೆ ಮಾಡುವಂತೆ ;"

"ಹಗಹದಲ್ಲಿ ಬಿದ್ದವರ ಮೇಲೆ ಒರಳ ನೂಂಕುವರೆ?
ಕೋಳದ ಮೇಲೆ ಸಂಕೋಲೆಯನಿಕ್ಕುವರೆ ?"

"ಕೆಸರಲ್ಲಿ ಬಿದ್ದ ಪಶುವಿನಂತಾನು ದೆಸೆದೆಸೆಗೆ ಬಾಯ
ಬಿಡುತ್ತಿದ್ದೇನಯ್ಯಾ ;"

"ಬಡ ಪಸು ಪಂಕದಲ್ಲಿ ಬಿದ್ದೊಡೆ ಕಾಲ ಬಡಿವು
ದಲ್ಲದೆ ಬೇರೆ ಗತಿಯುಂಟೆ ?"

"ಬೆಳೆಯ ಭೂಮಿಯಲೊಂದು ಪ್ರಳಯದ ಕಸ
ಹುಟ್ಟಿ ತಿಳಿಯಲೀಯದು, ಎಚ್ಚರಲೀಯದು ;"

"ಅಡವಿಯೊಳಗೆ ಹೊಲಬುಗೆಟ್ಟ ಪಶುವಿನಂತೆ
'ಅಂಬೇ' ಎಂದು ಕರೆಯುತ್ತಲಿದ್ದೇನೆ ;"

"ಚಂದ್ರಮನಂತೆ ಕಳೆಸಮನಿಸಿತ್ತೆನಗೆ, ಸಂಸಾರ
ವೆಂಬ ರಾಹು ಸರ್ವಗ್ರಾಸಿಯಾಗಿ ಸಂಗಿತ್ತಯ್ಯಾ ;"

"ಇಲಿ ಗಡಹ ನೊಡ್ಡಿದಲ್ಲಿಪ್ಪಂತೆ ಎನ್ನ ಸಂಸಾರ ;"

"ಶೂಲದ ಮೇಲಣ ವಿಭೋಗವೇನಾದೊಡೇನೊ?
ನಾನಾ ವರ್ಣದ ಸಂಸಾರ ಹಾವ ಹಾವಾಡಿಗನ
ಸ್ನೇಹದಂತೆ ;"

"ಸಂಸಾರ ಸಾಗರ ಸಿರದುದ್ದ ವಾದ ಬಳಿಕ
'ಏನ ಹೇಳುವೆನಯ್ಯ?"

ಬಸವಣ್ಣನವರ ದುರಂತ ಪ್ರಜ್ಞೆ ಮೇಲಿನ ಪಶ್ಚಾಂತಿ ವಾಕ್ಯಗಳಲ್ಲಿ ಸ್ಪುಟವಾಗಿ ಪ್ರಕಟವಾಗಿದೆ. ಬದುಕಿನ ಈ ದುರಂತ ಚಿತ್ರಗಳಿಗೆ ಎರಡು ವಿಧವಾಗಿ ಪ್ರತಿಕ್ರಿಯಿಸ ಬಹುದು :

"Like flies to wanton boys, we are to the gods : They kill us for their sport"

ಎಂದು ಉದ್ಗರಿಸಿ ದೈವದ ಮೇಲೋ, ಕರ್ಮದ ಮೇಲೋ ಇದರ ಹೊಣೆ ಹೇರಿ ಹಲುಬುತ್ತ ಕೂಡು ವುದು ಒಂದನೆಯ ವಿಧ ; ಬದುಕಿಗೇ ಅರ್ಥವಿಲ್ಲದಿರುವಾ ಇವುಗಳನ್ನು ಗಮನಿಸುವುದೇ ವ್ಯರ್ಥವೆನ್ನುವುದು ಎರ

ನೆಯ ವಿಧ–ಎರಡೂ ಸಕ್ರಿಯ ಪ್ರತಿಕ್ರಿಯೆಗಳಲ್ಲಿ ಸೋತು ಮೊಡೆಯೂರುವ ಪ್ರತಿಕ್ರಿಯೆ ಮನುಜ ಕುಲಕ್ಕೇ ಲಾಂಛನಾಸ್ಪದ.

ಬಸವಣ್ಣನವರ ಪ್ರತಿಕ್ರಿಯೆ ಸತ್ಯ ಪರಾಕ್ರಮಿಯ ಪ್ರತಿಕ್ರಿಯೆ :

"ಹುಟ್ಟಿಂದು ಲೋಕದಲ್ಲಿ ಹುಟ್ಟಿಸಿ,
ಇಳಿಯ ಬಿಟ್ಟೊಡೆ ನಿಮ್ಮ ನಗುವರಯ್ಯಾ ;
ಶಿವಬಟ್ಟೆಯೊಳೆನ್ನನು ಇರಿಸಯ್ಯಾ, ಹರನೇ.
ಹೊಲಬುಗೆಟ್ಟೆನು, ಬಟ್ಟೆಯ ತೋರಯ್ಯಾ ;
ಹುಯ್ಯಲಿಟ್ಟೆನು ;–"ಗಣಂಗಳೂ ಕೇಳಿರಯ್ಯಾ,
ಕೂಡಲ ಸಂಗಮ ದೇವಯ್ಯನೆನ್ನ
ಕಾಡಿಹನಯ್ಯಾ ;"

ಇಲ್ಲಿ ಎರಡು ಅಂಶಗಳು ಗಮನಾರ್ಹ : ಹುಟ್ಟಿಸಿದ ಶಿವ ಶಿವಬಟ್ಟೆಯಲ್ಲಿರಿಸದೆ ಕೈಬಿಟ್ಟರೆ ಅವನೇ ನಗೇಡಾಗುತ್ತಾನೆ ; ಶಿವನು ಕೈಬಿಟ್ಟರೂ ಭಕ್ತ ಗಣಂಗಳಿಗೆ ಮೊರೆಯಿಟ್ಟರೆ ಅವನು ದಾರಿಗೆ ಬರುತ್ತಾನೆ. ಎಂದರೆ ಶಿವನನ್ನೂ ಬಗ್ಗಿಸುವ ಶಕ್ತಿ ಶಿವಭಕ್ತರಿಗಿದೆ.

ಇದೇ ಆಶಯ ಕೆಳಗಣ ವಚನದಲ್ಲಿ ದುಂದುಭಿ ಗಂಭೀರನಾದದಲ್ಲಿ ಅಭಿವ್ಯಕ್ತವಾಗಿದೆ ;

"ಜಂಬೂದ್ವೀಪ ನವಖಂಡ ಪೃಥ್ವಿಯೊಳಗೆ
ಕೇಳಿರಯ್ಯಾ ಎರಡಾಳಿನ ಭಾಷೆಯ ;
"ಕೊಲುವೆನೆಂಬ ಭಾಷೆ ದೇವನದು :
"ಗೆಲುವೆ" ನೆಂಬ ಭಾಷೆ ಭಕ್ತನದು ;
ಸತ್ಯವೆಂಬ ಕೂರಲಗನೇ ಕಳೆದು ಕೊಂಡು
ಸದ್‌ಭಕ್ತರು ಗೆದ್ದರು, ಕಾಣಾ,
ಕೂಡಲ ಸಂಗಮದೇವಾ ;"

ಬದುಕೊಂದು ಬವರ–ಕೊಲುವೆನೆಂಬ ಅದೃಷ್ಟದೊಡನೆ, ಅದೃಶ್ಯ ಶಕ್ತಿಯೊಡನೆ ಬವರ ಸತ್ಯವೆಂಬ ಕೂರಲಗು ಕೈಯಲ್ಲಿದ್ದರೆ ಭಕ್ತನಿಗೇ ಗೆಲವು ಕಟ್ಟಿಟ್ಟ ಗಂಟು.

ಆದುದರಿಂದ ಬದುಕಿನ ದುರಂತಾಂಶಗಳಿಂದ ವಿಚಲಿತನಾಗದೆ, ಕೆಚ್ಚಿನಿಂದ ಕಲಿಯಾಗಿ ಕಾದಬೇಕು. ಈ ದೃಢ ಸಂಕಲ್ಪದೊಡನೆ ಮುನ್ನುಗ್ಗಬೇಕು :

ಬಸವಣ್ಣನವರ ವಚನಗಳಲ್ಲಿ ದುರಂತ ಪ್ರಜ್ಞೆ–ಬದುಕುವ ಪ್ರತಿಜ್ಞೆ

"ಎನಿಸೆನಿಸೆಂದೊಡೆ ನಾ ಧೃತಿಗೆಡೆನಯ್ಯಾ ;
ಎಲುವುದೋರಿದರೆ, ನರಹರಿದರೆ, ಕರುಳು
ಕುಪ್ಪಳಿಸಿದರೆ ನಾ ಧೃತಿಗೆಡೆನಯ್ಯಾ ;
ಸಿರ ಹರಿದು ಅಟ್ಟೆನೆಲಕ್ಕೆ ಬಿದ್ದರೆ ನಾಲಗೆ
'ಕೂಡಲಸಂಗಾ, ಶರಣೆನ್ನುತ್ತಿದ್ದೀತಯ್ಯಾ ;"

ಇನ್ನೊಂದು ಇಂಥದೇ ವಚನ :

"ಒಣಗಿಸಿ ಎನ್ನ ಘಣ ಘಣಲನೆ ಮಾಡಿದರೆಯೂ
ಹರಣವುಳ್ಳನ್ನಕ್ಕ ನಿಮ್ಮಾ ಚರಣವ ನೆನೆವುದ
ಮಾಣೆ, ಮಾಣೆ ; ಶರಣೆಂಬುದ ಮಾಣೆ, ಮಾಣೆ;
ಕೂಡಲ ಸಂಗಮ ದೇವಯ್ಯಾ ಎನ್ನ ಹೆಣನ ಮೇಲೆ
ಕಂಚಿಟ್ಟುಂಡರೆಯೂ ಮಾಣೆ, ಮಾಣೆ ;"

ಈ ಧೃತಿ, ಈ ದೃಢತೆ, ಈ ಛಲದ ಬಲಗಳ ಮುಂದೆ ದೈವದಾಟ ನಡೆದೀತೆ ?

"ಶರಣರೊಡನೆ ಶ್ರುಪವ ಮಾಡಿ ಮಾರುಗೋಲ
ಬಿಡುವೆನಯ್ಯಾ ;
ತಾಗಲಿ, ತಪ್ಪಲಿ 'ಗೆಲವೆನ್ನದೆಂ'ಬೆನಯ್ಯಾ ;
ಕಳನಿಂದ ಕಡೆಗಳಕ್ಕೆ ಓಡುವೆ,
ಕೂಡಲ ಸಂಗಯ್ಯಾ ;"

ಜೀವನದ ದುರಂತಾಂಶಗಳಂತೆ ಜೀವನದ ಕ್ಷಣಭಂಗುರತೆಯ ಅರಿವೂ ಅಣ್ಣನವರಿಗಿದೆ.

"ನಿಮಿಷದ ನಿಮಿಷಂ ಬೋ, ಕ್ಷಣದೊಳಗರ್ಧಂ
ಬೋ ;
ಕಣ್ಣಿ ಮುಚ್ಚಿ ಬಿಚ್ಚುವೈಸು ಬೇಗಂ ಬೋ ;
ಸಂಸಾರದಾಗುಂ ಬೋ ; ಸಂಸಾರದ ಹೋಗುಂ
ಬೋ ; ಸಂಸಾರದೊಪ್ಪ ಬೋ ;
ಕೂಡಲ ಸಂಗಮದೇವಾ :
ನೀ ಮಾಡಿದ ಮಾಯೇಂ ಬೋ,
ಅಭ್ರಚ್ಛಾಯೇಂಬೋ ;"

ಆದರೇನು, 'ಲೇಸೆನಿಸಿಕೊಂಡು ಒಂದು ದಿನ ಬದುಕಿದರೂ ಸಾಕೆಂದಿದ್ದ ಅವರು, 'ಮರಣವೇ ಮಹಾನವಮಿ' ಎಂದಿದ್ದ ಅವರು, 'ಕಾಳ ಬೆಳದಿಂಗಳು ಸಿರಿ ಸ್ಥಿರವಲ್ಲ' ಎಂದು ಸಾರಿದ್ದ ಅವರು 'ಕೇಡಿಲ್ಲದ ಪದವಿ'ಯನ್ನು

ಪಡೆಯಲು ಕಂಕಣ ಕಟ್ಟಿದರು. ಅದನ್ನು ಒಮ್ಮೆಗೇ ಪಡೆಯಲಾಗದೆಂದು ತಿಳಿದಿದ್ದರು. ಅಂತೆಯೇ

"ಭಕ್ತನೆನಿಸುವೆನಯ್ಯಾ ಮೆಲ್ಲ ಮೆಲ್ಲನೆ ;
ಯುಕ್ತನೆನಿಸುವೆನಯ್ಯಾ ಮೆಲ್ಲ ಮೆಲ್ಲನೆ ;
ಸಾರಿ ಶರಣನೆನಿಸುವೆನಯ್ಯಾ ಮೆಲ್ಲ ಮೆಲ್ಲನೆ ;
ಎಡಹುಂಗುಳಿಗಳ ದಾಟಿ ಬರಬರ
ಲಿಂಗೈಕ್ಯನೆನಿಸುವೆನಯ್ಯಾ ;
ಕೂಡಲ ಸಂಗಮದೇವಾ, ನಿಮ್ಮಿಂದಧಿಕ
ನೆನಿಸುವೆನಯ್ಯಾ,"

ಎಂದು ಪ್ರತಿಜ್ಞೆ ಮಾಡಿ, ಅದನ್ನು ಪೂರೈಸಿ ಪರಮಾರಾಧ್ಯರಾದರು.

ಇಂತಿದು ಬಸವ ವಚನಗಳಲ್ಲಿ ದುರಂತ ಪ್ರಜ್ಞೆ, ಬದುಕುವ ಪ್ರತಿಜ್ಞೆ.

* *

---

ಮಣಿಯನೆಣಿಸಿ ದಿನವ ಕಳೆಯಲು ಬೇಡ
ಕಣಿಯ ಪೂಜಿಸಿ ದಿನವ ಕಳೆಯಲು ಬೇಡ
ಕ್ಷಣವಾದಡೂ ನಿಜದ ನೆನಹೆ ಸಾಕು,
ಕ್ಷಣದೊಳಗಣ ಅರ್ಧವಾದಡೂ ನಿಜದ ನೆನಹೆ ಸಾಕು,
ಬೆಂಕಿಯೊಳಗುಳ್ಳಗುಣ ಬಿಸಿನೀರೊಳಗುಂಟೆ ಗುಹೇಶ್ವರಾ ?

— ಅಲ್ಲಮಪ್ರಭು

---